**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಮನುಷ್ಯ ಸಂಘಜೀವಿ. ಅನಾದಿ ಕಾಲದಿಂದಲೂ ಸಮಾಜದ ಸತ್ವವನ್ನು ಪರಿಶೀಲಿಸಿದರೆ ಸತ್ಯವೆಂದು ತಿಳಿದುಬರುವುದು. ಪರಸ್ಪರ ಸಹಕಾರ, ಉಪಕಾರ ಮೊದಲಾದುವುಗಳನ್ನು ವಿನಿಮಯ ಮಾಡಿಕೊಂಡು ಬದುಕುತ್ತಿದ್ದ.

ಊರಿನ ಯಾರಾದರೊಬ್ಬನ ಮನೆಯಲ್ಲಿ ಏನಾದರೊಂದು ಸಮಾರಂಭ ನಡೆಯ ಬೇಕಿದ್ದಾಗ ಸಮಾಜದ ಎಲ್ಲರೂ ಅವನಿಗೆ ವಸ್ತುರೂಪದಲ್ಲಿ ಸಹಾಯ ನೀಡುವುದು ಅಲ್ಲದೆ, ಸಮಾರಂಭದ ದಿನ ತಾವು ತಮ್ಮ ಮನೆಯವರ ಜೊತೆ ಸೇರಿ ಆ ಮನೆಗೆ ಹೋಗಿ ಅಲ್ಲಿ ನಡೆಯುತ್ತಿರುವ ಕೆಲಸಗಳಲ್ಲಿ ಸ್ವತಃ ಭಾಗಿಗಳಾಗುವುದು, ಮೊದಲಾದವುಗಳು ಕಳೆದ 15-20 ವರ್ಷಗಳ ಹಿಂದಿನವರೆಗೂ ನಡೆದು ಬರುತ್ತಿದ್ದ ಸಂಪ್ರದಾಯವಾಗಿತ್ತು. ಇವರಿಂದ ಸಮಾರಂಭ ಮಾಡುವಾತನಿಗೆ ಊರಿನವರಿಂದ ಸಹಕಾರದ 'ಆನೆ ಬಲ' ಬಂದಂತಾಗುತ್ತಿತ್ತು.

ಅದೇ ಇತ್ತೀಚಿನ ದಿನಗಳಲ್ಲಿ ಈ ಸ್ಥಿತಿ ಬದಲಾಗಿದೆ. ಸಮಾರಂಭ ನಡೆಸುವಾತನಿಗೆ ಯಾರೊಬ್ಬನ ಸಹಾಯ ಸಿಗುವುದು ಅಪರೂಪ. ಸಿಗುವುದೆಂದು ಭಾವಿಸಿ ಕೊಳ್ಳುವುದೂ ಅಸಾಧ್ಯವಾದ ಮಾತು. 'ಆತನ ತಲೆಗೆ ಆತನ ಕೈ' ಎಂಬಂತೆ ಇಳಿದ ಮೇಲೆ ಮುಳುಗಬೇಕು ಅಲ್ಲವೇ? ಅಂತೆಯೇ ಎಲ್ಲವನ್ನೂ ತಾನೇ ನಿಭಾಯಿಸಿಕೊಳ್ಳಬೇಕು.

ಬಹಳಷ್ಟು ವರದಾನಗಳೊಂದಿಗೆ ಸಮಾರಂಭದ ತಯಾರಿ ನಡೆಸುತ್ತಾನೆ. ತಾನೇ ಒದ್ದಾಡುತ್ತಾನೆ. ಸಾಧ್ಯವಾಗದೆ ಇದ್ದರೆ ಬಾಡಿಗೆ/ಕೂಲಿಯಾಳುಗಳ ಮೂಲಕ ಆ ಕೆಲಸವನ್ನು ಮಾಡಿಸುತ್ತಾನೆ. ಆಗ ಊರವರು ಸಮಾರಂಭದ ದಿನ ಹೊತ್ತಿಗೆ ಸರಿಯಾಗಿ ಆಗಮಿಸುತ್ತಾರೆ.

ಎಷ್ಟೋ ಮದುವೆ ಮನೆಗಳು ಮುಹೂರ್ತದ ಹೊತ್ತಿಗಿಂತ 1 ಗಂಟೆ ಮೊದಲು ಬಣಗುಟ್ಟುತ್ತಿರುತ್ತವೆ. ಆಪ್ತ ಬಂಧುಗಳು ಬಿಟ್ಟು ಉಳಿದವರೆಲ್ಲ ಆಗಮಿಸಿರುವುದೇ ಇಲ್ಲ. ಸಮಾರಂಭದಲ್ಲಿ ಮುಖ್ಯ ಕೆಲಸ ಆತಿಥ್ಯ ಪಡೆದುಕೊಳ್ಳುವುದೇ ಎಂಬಂತೆ ವರ್ತಿಸಿ ಆ ಕೆಲಸ ಮುಗಿದ ಕೂಡಲೇ ನಿರ್ಗಮಿಸುತ್ತಾರೆ. ಹಿಂದೆ ಕೂಡು ಕುಟುಂಬಗಳು ಇದ್ದಾಗ ಒಂದೇ ಮನೆಯಲ್ಲಿ 20-40 ಜನ ವಾಸ್ತವ್ಯವಿದ್ದು ಒಬ್ಬರಿಗೊಬ್ಬರು ಸಹಾಯ ಮಾಡುತ್ತಾ ಸಂತೋಷವಾಗಿ ಬದುಕುತ್ತಿದ್ದರು. ಅದೇ ಇತ್ತೀಚಿನ ದಿನಗಳಲ್ಲಿ ತಾನು, ಮಡದಿ, ಮಕ್ಕಳ ಹೊರತುಪಡಿಸಿ ಉಳಿದವರೊಂದಿಗೆ ಬದುಕು ಬೇಡವಾಗಿದೆ. ತನ್ನ ವೃದ್ಧರಾದ ತಂದೆ-ತಾಯಿಯರನ್ನು ತನ್ನೊಂದಿಗೆ ಇರಿಸಿಕೊಳ್ಳಲಾಗದೆ ಆಶ್ರಮದಲ್ಲಿಯೋ ಅಥವಾ ಬೇರೆಯೇ ವ್ಯವಸ್ಥೆ ...... ಸಾಕುವ ಎಷ್ಟು ಜನರಿಲ್ಲ? ಇದು ನಮ್ಮ ಬಾಂಧವ್ಯದ ಕೊಂಡಿ ಕಳಚಿಕೊಂಡಿದೆ ಎನ್ನುವುದರ ದ್ಯೋತಕವಾಗಿದೆ.

ಆದ್ದರಿಂದ "ಪರೋಪಕಾರಾಯ ಪುಣ್ಯಾಯ ಪಾಪಾಯ ಪರಪೀಡನಮ್" ಎಂಬ ಆರ್ಯೋಕ್ತಿಯಂತೆ 'ಕಲೆತು ಬಾಳೋಣ', 'ಕೂಡಿ ಬದುಕೋಣ', ಎಂದು ತಿಳಿದುಕೊಂಡು ಸಾಮಾಜಿಕ ಮೌಲ್ಯವನ್ನು ಎತ್ತಿಹಿಡಿಯೋಣ.

# ಕ್ರೌಂಚವಧೆ (ಪೌರಾಣಿಕ ಕಥೆ)

**- ಡಾ| ವೈ. ಶಂಕರನಾರಾಯಣರಾವ್ ಪಡುಬಿದಿರೆ**

ಜುಳು ಜುಳು ನಿನಾದದಿಂದ ಶುಭ್ರ ಸಲಿಲ ರಾಶಿಯನ್ನು ಮುಂತಳ್ಳುತ್ತಾ ತಮಸಾ ನದಿಯು ಪ್ರವಹಿಸುತ್ತಿದೆ. ನದಿ ತೀರದ ಎಲ್ಲೆಡೆಗಳಲ್ಲಿಯೂ ಜೀವರಾಶಿಗಳಿಗೆ ಚೈತನ್ಯವೀಯುವ ದಟ್ಟವಾದ ನಿತ್ಯ ಹರಿದ್ವರ್ಣದ ಅರಣ್ಯಗಳಿವೆ. ಆ ಹೊತ್ತು ದಿನಕರನು ತನ್ನ ಹೊಂಗಿರಣಗಳ ನಿಡಿದಾದ ತೋಳುಗಳಿಂದ ಉಷೆಯನ್ನು ಆಲಂಗಿಸಿಕೊಳ್ಳಲು ಸನ್ನಾಹ ನಡೆಸುತ್ತಿದ್ದಾನೆ. ಸನಿಹದಲ್ಲಿರುವ ವಾಲ್ಮೀಕಿ ಋಷಿಗಳ ಆಶ್ರಮದಿಂದ ಸುಗಂಧ ಭೂಯಿಷ್ಟವಾದ ಹೋಮ ಧೂಮವು ಆಗಸಕ್ಕೇರುತ್ತಿದೆ. ಮಹರ್ಷಿಗಳು ಆಗ ತಾನೇ ಅಗ್ನಿಗೆ ಆಜ್ಯವನ್ನು ಅರ್ಪಿಸಿ ತೇಜೋವಂತರಾಗಿದ್ದಾರೆ. ಶಿಷ್ಯ ಭಾರದ್ವಾಜರು ವಿನೀತರಾಗಿ ಕೈಗಳನ್ನು ಮುಗಿದು ಆಶ್ರಮದಲ್ಲಿ ಆ ದಿವಸ ನಡೆಸಬೇಕಾಗಿರುವ ಕಾರ್ಯ ಚಟುವಟಿಕೆಗಳನ್ನು ಗುರುಗಳಲ್ಲಿ ನಿವೇದಿಸಿಕೊಳ್ಳುತ್ತಿದ್ದಾರೆ. ಅಷ್ಟರಲ್ಲಿಯೇ ಆಶ್ರಮದ್ವಾರದಿಂದ "ನಾರಾಯಣ, ನಾರಾಯಣ" ಎಂಬ ಹರಿನಾಮ ಸ್ಮರಣೆ ಕಂಚಿನ ಕಂಠದಿಂದ ಕೇಳಿಬಂತು. ಮಹರ್ಷಿಗಳು ಕಣ್ಣರಳಿಸಿ ನೋಡುತ್ತಾರೆ; ಸಾಕ್ಷಾತ್ ಬ್ರಹ್ಮದೇವನ ಮಾನಸ ಪುತ್ರರಾದ ತ್ರಿಲೋಕ ಸಂಚಾರಿ ನಾರದರು! ವಾಲ್ಮೀಕಿಯವರು ಅವರನ್ನು ಆದರದಿಂದ ಸ್ವಾಗತಿಸಿ, ಉಚಿತಾಸನದಲ್ಲಿ ಕುಳ್ಳಿರಿಸಿ ಅರ್ಘ್ಯ-ಪಾದ್ಯ, ಮಧುಪರ್ಕಗಳಿಂದ ಸತ್ಕರಿಸಿದರು.

ಮಹರ್ಷಿಗಳು ಕೈ ಮುಗಿದು "ಮುನಿಗಳೇ, ಈ ಲೋಕದಲ್ಲಿ ಧರ್ಮಿಷ್ಠನೂ, ಸತ್ಯಸಂಧನೂ, ಮಹಾಪರಾಕ್ರಮಿಯೂ, ಅಕಲಮಕನೂ ಮಹಾಜ್ಞಾನಿಯೂ, ಮರ್ಯಾದಾ ಪುರುಷೋತ್ತಮನೂ ಆದ ಮಹಾ ಪುರುಷನೊಬ್ಬನು ಇದ್ದರೆ ಅವನ ಚರಿತ್ರೆಯನ್ನು ಕೇಳಲು ನನ್ನ ಮನವು ಉತ್ಸುಕವಾಗಿದೆ. ತಾವು ಕೃಪೆಯಿಟ್ಟು ಆಂತಹ ಧರ್ಮಾತ್ಮನ ಕಥೆಯನ್ನು ಹೇಳಿ ಧನ್ಯನನ್ನಾಗಿಸಬೇಕು" ಎಂದು ಬಿನ್ನವಿಸಿಕೊಂಡರು. ನಾರದರು ಪ್ರಸನ್ನಚಿತ್ತರಾಗಿ 'ಮಹರ್ಷಿಗಳೇ, ಸತ್ವಗುಣ ಸಂಪನ್ನರೂ, ಲೋಕ ಕಲ್ಯಾಣವನ್ನೇ ಬಯಸುವ ನಿಮ್ಮಂತಹ ಸುಜ್ಞಾನಿಗಳು ಮಹಾಪುರುಷನೊಬ್ಬನ ಕಥೆಯನ್ನು ಕೇಳಲು ಬಯಸುವುದು ಸಹಜವೇ ಆಗಿದೆ. ಇಂತಹ ವಿರಳಾತಿವಿರಳರಲ್ಲಿ ಇಕ್ಷ್ವಾಕು ವಂಶದ ಶ್ರೀ ರಾಮಚಂದ್ರನು ಒಬ್ಬನು. ಅವನ ಕಥೆಯನ್ನು ಹೇಳುವೆನು" ಎಂದು ನುಡಿದು ಕಥೆಯನ್ನು ಕೆಲವೆಡೆ ಚುಟುಕಾಗಿಯೂ ಅಗತ್ಯವಿದ್ದಲ್ಲಿ ವಿಸ್ತರಿಸಿಯೂ ಹೇಳಿದರು. ನಾರದರು ಹೇಳಿದ ಅದ್ಭುತವಾದ ಕಥೆಯಿಂದ ಮಹರ್ಷಿಗಳು ಪ್ರಭಾವಿತರಾದರು. ಆ ಗಳಿಗೆಯಿಂದ ಅವರಿಗೆ ರಾಮನಾಮವೇ ತಾರಕ ಮಂತ್ರವಾಯಿತು.

ನಾರದ ಮುನಿಗಳನ್ನು ಬೀಳ್ಕೊಂಡ ಋಷಿಗಳು ಮಾಧ್ಯಾಹ್ನಿಕಕ್ಕೆಂದು ನದೀ ತೀರಕ್ಕೆ ಆಗಮಿಸಿದರು. ಎತ್ತ ನೋಡಿದರೂ ಅಲ್ಲಿ ತುಂಬಿದ ಪ್ರಕೃತಿ ಸೌಂದರ್ಯವೇ ಸೌಂದರ್ಯ! ಮಾರುತನ ರಭಸಕ್ಕೆ ಚಲಿಸುವ ಕೊಂಬೆರೆಂಬೆಗಳ ಎಡೆಯಿಂದ ತೂರಿ ಬರುವ ಸೂರ್ಯರಶ್ಮಿಗಳು ಭೂಮಿಯ ಮೇಲೆ ಬೆಳಕಿನ ಬಗೆಬಗೆಯ ವರ್ಣ ಚಿತ್ತಾರಗಳನ್ನು ರಚಿಸಿ ಚಿನ್ನಾಟವಾಡುತ್ತಿವೆ. ಗಿಡಗಳಲ್ಲಿ ವರ್ಣಮಯ ಕಾಡು ಕುಸುಮಗಳು ಅರಳಿ ಸುಗಂಧವನ್ನು ಬೀರುತ್ತಿವೆ. ವೃಕ್ಷಗಳಿಗೆ ಹಬ್ಬಿದ ಲತೆಗಳಿಂದ ಜೊಂಪೆ-ಜೊಂಪೆಯಾಗಿ ಪುಷ್ಪಗಳು ಅರಳಿ ಬಾಗಿ ಬಳುಕಿ ಮಹರ್ಷಿಗಳಿಗೆ ಸ್ವಾಗತವನ್ನು ಕೋರುತ್ತಿವೆ. ಅಲ್ಲಲ್ಲಿ ನಿಂತಿರುವ ಸುಂದರ ಹುಲ್ಲೆಗಳು ಮೇಯುವುದನ್ನು ನಿಲ್ಲಿಸಿ ಕಿವಿಗಳನ್ನು ನಿಮಿರಿಸಿಕೊಂಡು ಮಹರ್ಷಿಗಳ ಸ್ಪರ್ಶ ಸುಖಕ್ಕಾಗಿ ಕಾತರಿಸುತ್ತಿವೆ.

ಅನತಿದೂರದ ಬೃಹತ್ತಾದ ವಟವೃಕ್ಷದ ಕೆಳಗೆ ಮಹರ್ಷಿಗಳು ಅಪೂರ್ವವಾದ ದೃಶ್ಯವೊಂದನ್ನು ಕಂಡರು. ಕ್ರೌಂಚ ಪಕ್ಷಿಗಳ ಗಂಡು ಹೆಣ್ಣು ಜೋಡಿಯೊಂದು ಪ್ರಕೃತಿಯ ಜೀವ ಜಾಲಕ್ಕೆ ಕೊಂಡಿಯೊಂದನ್ನು ಬೆಸೆಯುವ ತವಕದಿಂದ ಸುರತ ಕ್ರೀಡೆಯಲ್ಲಿ ನಿರತವಾಗಿದ್ದವು. ಒಂದು ಮತ್ತೊಂದನ್ನು ಅಟ್ಟಿಸಿಕೊಂಡು ಹಾರುವುದು; ಲಾಘುಕ್ಷವದಿಂದ

(6ನೇ ಪುಟಕ್ಕೆ ...)

# ಅನುಭವ.....

**- ಡಾ| ವೈ, ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಉಡುಪಿ**

...... ಖಂಡಿತ ಸಾಧಿಸಿಯೇ ಸಾಧಿಸುತ್ತೇನೆಂದು ಕೊಂಡು ಆ ವ್ಯವಸ್ಥೆಯ ಮೊತ್ತಮೊದಲ ಅನುಮಾನ, ಅನುಭವ ಹೇಗೆ ಉಂಟಾಯಿತು?

ಹರಿಯುವ ನೀರೊಂದು ಶಕ್ತಿಯ ಆಗರ, ಆ ಶಕ್ತಿಯಿಂದ ಹೊಸತೊಂದು ಶಾಕ್ ಹೊಡೆಯುವ ಬೆಳಕಿನ ಗುಣವುಳ್ಳ ವಿದ್ಯುತ್ತನ್ನು ಪಡೆಯಬಹುದು. ಅದನ್ನು ಸರಿಗೆಗಳಲ್ಲಿ ಪ್ರವಹಿಸಿ ನಮಗೆ ಬೇಕಾದಂತೆ ಉಪಯೋಗಿಸಬಹುದು. ಆ ಶಕ್ತಿಯಿಂದ ಬೆಳಕನ್ನು ಪಡೆಯಬಹುದು ಎಂಬಿತ್ಯಾದಿ "ಅರಿವು"ಗಳು ವಿಜ್ಞಾನಿಗೆ ಹೊಳೆದು ತೋರಿದ್ದು ಯಾಕೆ, ಹೇಗೆ?... ಈ ಹೊಳೆದು ತೋರುವ ಗುಣವೂ ಕೂಡಾ ಬೆಳಕಿನ ಗುಣವೇ, ಅಲ್ಲವೇ? ಅದೇ ಆತ್ಮ ಅನುಭವಗಳು ಮಿಂಚಿನಂತೆ ಹೊಳೆದು ತೋರುತ್ತವೆ. ಪುಸ್ತಕಗಳಲ್ಲಿ ಬರೆದ ಬರಹಗಳು ಕೂಡಾ ಜ್ಞಾನರೂಪದ ಅನುಭವಗಳಾಗುತ್ತವೆ. ಆ ಅನುಭವಗಳು ಬರೆಯುವಾತನಿಗೆ ಹೊಳೆದು ತೋರುತ್ತವೆ. ಅಂದರೆ ಅದು ಜ್ಞಾನಜ್ಯೋತಿ, ಜ್ಞಾನದ ಬೆಳಕು. ಬರಹಗಳು ಜ್ಞಾನದ ಬೆಳಕು ಹೇಗಾಯ್ತು? ಆ ಬೆಳಕೇ ಆತ್ಮ.

ಪ್ರವಹಿಸುವ ನೀರಿನಲ್ಲಿ ನಿರಾಕಾರವಾಗಿರುವ ಶಕ್ತಿ. ತಾಮ್ರದ ಸರಿಗೆಗಳಲ್ಲಿ ಕಣ್ಣಿಗೆ ಕಾಣದಂತೆ ಮನೋವೇಗದಲ್ಲಿ ಚಲಿಸಿ ಬಲ್ಬಿನಲ್ಲಿ ಬೆಳಕಾಗಿ ಭೌತಿಕ ರೂಪದಲ್ಲಿ ಕಾಣಬಹುದಾದರೆ ಪ್ರಾಪಂಚಿಕ ವೃತ್ತಿಗಳು ಇಂದ್ರಿಯಗಳ ಮೂಲಕ ನರವಾಹಕಗಳಲ್ಲಿ ಹರಿದು ಮನೋವೇಗದಲ್ಲಿ ಹರಿದು ನರಕೇಂದ್ರಗಳಲ್ಲಿ ಅರಿವಾಗಿ ಬೆಳಗುವುದರಲ್ಲಿ ಆಶ್ಚರ್ಯವೇನಿದೆ? ವಿಶ್ವವೆಲ್ಲಾ ಬೆಳಕೇ. ಬೆಳಕಿನಲ್ಲಲ್ಲದೆ ಅನುಭವವೇ ಇಲ್ಲ. ಪ್ರಪಂಚವೂ ಇಲ್ಲ. ಭೌತಿಕವಾಗಿ ಬೌತಿಕ ಬೆಳಕಿಲ್ಲದೆ ಪ್ರಪಂಚದ ಅರಿವೇ ಇಲ್ಲ. ಈ ಭೌತಿಕ ಪ್ರಪಂಚವು ಅರಿವು "ನಾನು" ಇಲ್ಲದೆ ಆಗುವುದೇ ಇಲ್ಲ. ನಾನು, ಅರಿವು, ಬೆಳಕು ಅನುಭವ, ಪ್ರಾಪಂಚಿಕ ವೃತ್ತಿಗಳನ್ನು ಪ್ರತ್ಯೇಕಿಸಲೂ ಆಗುವುದಿಲ್ಲ. ಯಾಕೆಂದರೆ ಪ್ರಪಂಚವೇ ನಿರಾಕಾರವಾದ ವೃತ್ತಿಗಳಾಗುತ್ತವೆ. ಇವು ಮತ್ತೆ ನಿರಾಕಾರವಾಗಿಯೇ ಇಂದ್ರಿಯಗಳಿಗೆ ತಲುಪುತ್ತವೆ. ಇವು ಮತ್ತೆ ನಿರಾಕಾರವಾಗಿಯೇ ಮನಸ್ಸು ಬುದ್ಧಿಗಳ ಮೂಲಕ ಅರಿವನ್ನು "ನನಗೆ" ಉಂಟುಮಾಡುತ್ತವೆ ಮತ್ತು "ನಾನು" ಅದನ್ನು ಅರಿಯುತ್ತೇನೆ. ವೃತ್ತಿ ರೂಪವು ರೂಪಾಂತರದಲ್ಲಿ ಅಲ್ಲದೆ ನಮಗೆ ಪ್ರಪಂಚದ ಯಾವುದೇ ಅನುಭವವೆಂಬುವುದೇ ಇಲ್ಲ. ಆದರೆ ವೃತ್ತಿಯೇ ಅನುಭವವಲ್ಲ. ವೃತ್ತಿಯು ಅನುಭವವಾಗಿ ಬೆಳಕಿನಂತೆ ಆ ಅನುಭವದ ಅನುಭವವಾಗುತ್ತದೆ. ಆ ಬೆಳಕು ಬೇರೆ, ಅನುಭವವೇ ಬೇರೆ, ನಾನು ಬೇರೆ ಅಲ್ಲ. ಆದುದರಿಂದ ಈ ಅರಿವು, ನಾನು, ವೃತ್ತಿ ಬೆಳಕು ಪ್ರಪಂಚಗಳು ಬೇರೆ ಬೇರೆ ಅಲ್ಲ. ಅವೆಲ್ಲವೂ ಬೆಳಕಿನ ರೂಪಾಂತರಗಳೇ. ಸಾಕಾರವೇ ನಿರಾಕಾರವಾಗುತ್ತದೆ. ನಿರಾಕಾರವೇ ಸಾಕಾರವಾಗುತ್ತದೆ. ಆ ಅರಿವೇ ನಾನಾಗುತ್ತೇನೆ. ಈ ಅನುಭವವೂ ಬೇರೆ ನಾನೂ ಬೇರೆ ಬೇರೆ ಅಲ್ಲ. ಆದುದರಿಂದ ನಾನು ಎಂದರೆ ಆತ್ಮನೇ ಮತ್ತು ಆ ನಾನೇ ಅನುಭವ, ಅರಿವು, ಬೆಳಕು ಎಂಬುದರಲ್ಲಿ ಸಂಶಯವಿಲ್ಲ.

(6ನೇ ಪುಟಕ್ಕೆ ...)

## ಹೊಸ ಬೆಳಕು

**ನಲ್ನುಡಿ :**

**ದೇವಾ ನೋ ಯಥಾ ಸದಮಿದ್‌ವೃಧೇ**
**ಅಸನ್ನಪ್ರಾಯವೋ ರಕ್ಷಿತಾರೋ ದಿವೇ ದಿವೇ ||**

ಅಂದರೆ ದೇವರು ಸದಾ ನಮಗೆ ಉತ್ಕರ್ಷ ನೀಡಲಿ, ನಮ್ಮಿಂದ ಎಂದೂ ದೂರಾಗದೆ ಅನುದಿನವೂ ನಮಗೆ ರಕ್ಷಣೆಯನ್ನು ಒದಗಿಸುತ್ತಿರಲಿ

**ಪುಸ್ತಕ ಪರಿಚಯ :**

**ಗ್ರಾಮವೈದ್ಯ :**

*ಮೂಲಲೇಖಕರು* - ದಿ| ಶ್ರೀ ಎಲ್ಲೂರು ಲಕ್ಷ್ಮೀನಾರಾಯಣರಾವ್ ಜ್ಯೋತಿಷ್ಕ
*ಸಂಗ್ರಹ* - ಶ್ರೀ ವೈ. ಲಕ್ಷ್ಮೀಶ ರಾವ್

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಎಲ್ಲೂರು ಜೋಯಿಸರು' ಎಂದೇ ಪ್ರಸಿದ್ಧರಾದವರು ದಿ| ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕರು. ಆಯುರ್ವೇದ ಶಾಸ್ತ್ರ ಮತ್ತು ಜ್ಯೋತಿಷ್ಯ ಶಾಸ್ತ್ರಗಳ ಕಾರ್ಯಚಟುವಟಿಕೆಗಳಿಗಾಗಿ ತಮ್ಮ ಮನೆ 'ಶಾಂತಿಭವನ'ದಲ್ಲಿ 'ಸುಜ್ಞಾನಾಮೃತ ಜ್ಯೋತಿಷ್ಯ ವೈದ್ಯಶಾಲಾವನ್ನು ಸ್ಥಾಪಿಸಿದರು. ಅಖಿಲ ಭಾರತ ಆಯುರ್ವೇದದ ಸಮ್ಮೇಳನಗಳಲ್ಲಿ ಭಾಗವಹಿಸಿ ಹಲವು ಬಾರಿ ತಮ್ಮ ಸಂಚಾರಿ ಮೂಲಿಕೋದ್ಯಾವನಕ್ಕೆ ಚಿನ್ನದ ಪದಕ, ಪ್ರಶಸ್ತಿಗಳನ್ನು ಗಳಿಸಿದ್ದು ಇವರ ವಿಶೇಷತೆ. ಇವರು ರಚಿಸುತ್ತಿದ್ದ ಎಲ್ಲೂರು ಪಂಚಾಂಗ ಜನಮನ್ನಣೆಯನ್ನು ಪಡೆದಿತ್ತು. 'ಲಕ್ಷ್ಮೀಶ' ಎಂಬ ಕಾವ್ಯನಾಮದ ಮೂಲಕ ಸಾಹಿತ್ಯ ಲೋಕದಲ್ಲಿ ಇವರು ಪ್ರಸಿದ್ಧರು.

ಶ್ರೀಯುತರು ಚರಕ ಸುಶ್ರುತ, ವಾಗ್ಭಟ ಇತ್ಯಾದಿ ಗ್ರಂಥಗಳನ್ನು ಜಾಲಾಡಿ ಸಾರಭಾಗವನ್ನು ಕನ್ನಡ ಭಾಷೆಯಲ್ಲಿ ಸುಮಾರು 1950ರ ದಶಕದಲ್ಲಿ 'ಗ್ರಾಮವೈದ್ಯ' ಗ್ರಂಥರೂಪದಲ್ಲಿ ಲಕ್ಷ್ಮೀಶ ಮುದ್ರಿಕೆಯಲ್ಲಿ ರಚಿಸಿದರು. ಈ ಗ್ರಂಥವು 17ನೇ ಅಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನದಲ್ಲಿಯೂ ದಕ್ಷಿಣ ಕನ್ನಡ ಜಿಲ್ಲಾ ವೈದ್ಯ ಪರಿಷತ್ತಿನಲ್ಲಿಯೂ ಸುವರ್ಣ ಪದಕವನ್ನು ಪಡೆದಿರುತ್ತದೆ. ಶ್ರೀ ಎಲ್ಲೂರು ಲಕ್ಷ್ಮೀನಾರಾಯಣರಾವ್ ಚಟುವಟಿಕೆಯಾಗಿ 'ಗ್ರಾಮವೈದ್ಯ' ಗ್ರಂಥವನ್ನು ಮರು ಪ್ರಕಟಿಸಿರುತ್ತಾರೆ. ಸಂಸ್ಕೃತ ಶ್ಲೋಕಗಳಂತೆ ನೆನಪಿಟ್ಟುಕೊಳ್ಳಲು ಅನುಕೂಲವಾಗುವುದಕ್ಕಾಗಿ ಕನ್ನಡದಲ್ಲಿ ಪದ್ಯರೂಪದಲ್ಲಿ ಬರೆಯಲಾಗಿದೆ. ಗ್ರಾಮವೈದ್ಯರು ಅಗತ್ಯವಾಗಿ ತಿಳಿಯಬೇಕಾದ ಮುಖ್ಯ ವಿಷಯಗಳನ್ನು ಇದರಲ್ಲಿ ಬರೆದಿರುವ ಕಾರಣ ಇದಕ್ಕೆ 'ಗ್ರಾಮವೈದ್ಯ'ವೆಂದು ಹೆಸರು ಇಟ್ಟಿರುವರು. ಈ ಗ್ರಂಥದಲ್ಲಿ 13 ಅಧ್ಯಾಯಗಳಿದ್ದು 90 ಪದ್ಯಗಳಿದ್ದು ಆಯುರ್ವೇದದ ವಿವಿಧ ಪ್ರಕಾರಗಳನ್ನು ತ್ರಿದೋಷಗಳನ್ನು ಚಿಕಿತ್ಸಾ ವಿಧಾನಗಳನ್ನೂ ರೋಗ ನಿವಾರಕ ಔಷಧಗಳನ್ನು, ಏಕಮೂಲಿಕೆ ಪ್ರಯೋಗಗಳನ್ನು ಸುಂದರವಾಗಿ ವರ್ಣಿಸಲಾಗಿದೆ. ಇದನ್ನು ಪ್ರತಿಯೊಂದು ಮನೆಯಲ್ಲಿ ಇರಿಸಿಕೊಂಡರೆ ಇದು ಮನೆವೈದ್ಯನಂತೆ ಸಹಕರಿಸುತ್ತದೆ. ಈ ಕೃತಿಗೆ ಉಡುಪಿ ಶ್ರೀ ಧರ್ಮಸ್ಥಳ ಆಯುರ್ವೇದ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ| ವಿಜಯೇಂದ್ರ ಮೂರ್ತಿಯವರು ಮುನ್ನುಡಿ ಬರೆದಿದ್ದಾರೆ. ಆಳ್ವಾಸ್ ಕಾಲೇಜು ಮೂಡುಬಿದ್ರೆ ಇದರ ಪ್ರಾಂಶುಪಾಲರಾದ ಶ್ರೀ ವೈ. ವಿ.ರತ್ನಾಕರ ರಾವ್ ಲೇಖಕರನ್ನು ಪರಿಚಯಿಸಿರುತ್ತಾರೆ.

***- ವೈ. ಮೋಹನರಾವ್***

ಶ್ರೀಶಾರದಾ ವೇದಿಕೆಯ ಮಹಾ ಪೋಷಕರು : ಅಂಬಲಪಾಡಿ ಕೃಷ್ಣ ರಾವ್, ಡಾ| ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ| ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ| ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ| ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ